ಓ.ಎಸ್. ನಂ.104/2021
ಪಿ. ಡಬ್ಲ್ಯೂ-1

<u>ದಿನಾಂಕಃ **12-01-2026**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು : 10 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಹೆಚ್.ಜಿ. ರವರಿಂದ

ಭೀಮವ್ವರವರು ಸಾಯಿಬಣ್ಣ ತೆಳಗರ್ ರವರ ಹೆಂಡತಿ ಇರುತ್ತಾರೆ ಎಂದರೆ ಸರಿ. ಸಾಯಿಬಣ್ಣನ ತಂದೆಯ ಹೆಸರು ತಿಮ್ಮಣ್ಣ ಇರುತ್ತದೆ. ಸಾಯಿಬಣ್ಣನ ತಂದೆಯ ಹೆಸರು ತಿಮ್ಮಣ್ಣ ಇರುತ್ತದೆ ಎಂದು ನಾನು ಬರೆಸಿರುವುದಿಲ್ಲ. ಭೀಮವ್ವ ರವರಿಗೆ ಮೂರು ಜನ ಮಕ್ಕಳು ಇರುತ್ತಾರೆ. ದುರ್ಗಮ್ಮ ರವರು ದಾವೆಯನ್ನು ಸಲ್ಲಿಸಿದ ನಂತರ ಮೃತಪಟ್ಟಿರುತ್ತಾರೆ. ದುರ್ಗಮ್ಮ ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಸೇಪರ್ಡೆ ಮಾಡಿರುವುದಿಲ್ಲ. ಮಲ್ಲಪ್ಪ ಇತನು ಭೀಮವ್ವ ಮತ್ತು ಸಾಯಿಬಣ್ಣ ಮಗ ಇರುತ್ತಾನೆ ಎಂದರೆ ಸರಿ. ಅದೇ ರೀತಿ ಭೀಮವ್ವ ಮತ್ತು ಸಾಯಿಬಣ್ಣ ರವರ ಇನ್ನೊಬ್ಬ ಮಗ ಕಲ್ಲಪ್ಪ ಸಹ ಮೃತಪಟ್ಟಿರುತ್ತಾನೆ. ಕಲ್ಲಪ್ಪ ಇತನು ಮೊದಲೇ ಮೃತಪಟ್ಟಿರುತ್ತಾನೆ. ಅದೇ ರೀತಿ ಮಲ್ಲಪ್ಪ ಸಹ ಮೃತಪಟ್ಟಿರುತ್ತಾನೆ. ಮಲ್ಲಪ್ಪನ ಹೆಂಡತಿಯ ಹೆಸರು ಶರಣಮ್ಮ ಇರುತ್ತದೆ ಅವರು ಈ ದಾವೆಯಲ್ಲಿ 2 ನೇ ಪ್ರತಿವಾದಿ ಇರುತ್ತಾರೆ. ಮಲ್ಲಪ್ಪ ಮತ್ತು ಶರಣಮ್ಮ ರವರಿಗೆ ಸಾಬಯ್ಯ, ಮಲ್ಲಯ್ಯ, ಪಾರ್ವತಿ, ಮಹಾದೇವಮ್ಮ ಹಾಗೂ ಹಣಮಂತ ಇವರೆಲ್ಲರೂ ಮಕ್ಕಳು ಇರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯು ಮೊದಲಿನಿಂದಲೂ ಮಲ್ಲಪ್ಪ ತಂದೆ ಸಾಯಿಬಣ್ಣರವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ದೊಡ್ಡಮಲ್ಲಪ್ಪರವರ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ದೊಡ್ಡಮಲ್ಲಪ್ಪ ಮತ್ತು ಸಣ್ಣ ಮಲ್ಲಪ್ಪ ಹೆಸರುಗಳು ಇರುತ್ತವೆ ಎಂದು ತೋರಿಸಲು ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ. ದೊಡ್ಡಮಲ್ಲಪ್ಪನ ಹೆಸರಿನಲ್ಲಿ ಇರುತ್ತವೆ ಎಂದು ಯಾವುದೇ ಕಾಗದ ಪತ್ರಗಳು ಇರದಿದ್ದರು ಸಹ ದೊಡ್ಡಮಲ್ಲಪ್ಪನ ಹೆಸರಿನಲ್ಲಿ ಇರುತ್ತವೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನು ಸರ್ವೆ ನಂಃ 21-50-51 ಇತ್ತು ಎಂದರೆ ಸರಿ. ಮಲ್ಲಪ್ಪ ಮೃತಪಟ್ಟ ನಂತರ 2017 ರಲ್ಲಿ 8 ನೇ ಪ್ರತಿವಾದಿಯು ದಾವಾ ಜಮೀನನ್ನು ಅಳತೆ ಮಾಡಿ ತನ್ನ ಹೆಸರನ್ನು ದಾಖಲಿಸಿದರು ಎಂದರೆ ಸರಿಯಲ್ಲ. 2017 ರಲ್ಲಿ ದಾವಾ ಜಮೀನು ಸರ್ವೆ ನಂಃ 21-50-51 ನೇದ್ದರಲ್ಲಿ ಇರುವ ಜಮೀನನ್ನು 8 ನೇ ಪ್ರತಿವಾದಿಯು ಅಳತೆ ಮಾಡಿಸಿದರಿಂದ ಕಂದಾಯ ಇಲಾಖೆಯವರು ಸದರಿ ಜಮೀನನ್ನು ಪೋಡಿ ಮಾಡಿ ಸರ್ವೆ ನಂಃ 21 ರಲ್ಲಿ 5 ಎಕರೆ ಜಮೀನನ್ನು 8 ನೇ ಪ್ರತಿವಾದಿಯ ಹೆಸರಿಗೆ ದಾಖಲಿಸಿದರು ಎಂದರೆ ಸರಿ. 8 ನೇ ಪ್ರತಿವಾದಿಯು ಜಮೀನನ್ನು ಅಳತೆ ಮಾಡಲು ಅರ್ಜಿಗೆ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ತಂದೆಯ ಆಸ್ತಿಯು 8 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು ದಾವಾ ಜಮೀನು 5 ಎಕರೆಯನ್ನು 9 ನೇ ಪ್ರತಿವಾದಿಗೆ ಖರೀದಿ ಪತ್ರದ ಸಂಖ್ಯೆ:

7272/2019-20 ರಲ್ಲಿ ಖರೀದಿ ಕೊಟ್ಟಿದ್ದನ್ನು ಎಂದರೆ ಸರಿಯಲ್ಲ. ಖರೀದಿ ಪತ್ರ ಕಾನೂನು ಬದ್ಧವಾಗಿ ಇರುತ್ತದೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ 9 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. 2017-18 ರಲ್ಲಿ 5 ಎಕರೆ ಜಮೀನನ್ನು 9 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ ಖರೀದಿ ಪತ್ರದ ಸಂಖ್ಯೆಯು 5668/2017-18 ಇರುತ್ತದೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದ ನಂತರ ಆತನು 10 ನೇ ಪ್ರತಿವಾದಿಗೆ ನೊಂದಣಿಯಿತ ಖರೀದಿ ಪತ್ರದ ಸಂಖ್ಯೆ: 7272/2019-20 ನೇದ್ದರ ಮೂಲಕ ಬರೆದುಕೊಟ್ಟಿದ್ದನ್ನು ಎಂದರೆ ಸರಿಯಲ್ಲ. ಖರೀದಿ ಪತ್ರದ ಮೂಲಕ 10 ನೇ ಪ್ರತಿವಾದಿಯೇ 5 ಎಕರೆ 28 ಗುಂಟೆ ಜಮೀನಿನ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆದಾಗಿನಿಂದ 10 ನೇ ಪ್ರತಿವಾದಿಯೇ 5 ಎಕರೆ 28 ಗುಂಟೆ ಜಮೀನಿನ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ನಾವು ದಾವಾ ಜಮೀನಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಯಿಬಣ್ಣನಿಗೆ ಭೀಮವ್ವ ಒಬ್ಬಳೇ ಹೆಂಡತಿ ಇರುತ್ತಾಳೆ ಎಂದರೆ ಸರಿಯಲ್ಲ. ತಿಪ್ಪಮ್ಮ ರವರು ಸಾಯಿಬಣ್ಣನ ಹೆಂಡತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ